ಕರ್ನಾಟಕ ಸರ್ಕಾರ

ಸಂ.ಡಿಟಿಇ/ 22 /ಎಸಿಎಂ(1)/2013-14

ನಿರ್ದೇಶಕರವರ ಕಛೇರಿ
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ,
ಅರಮನೆ ರಸ್ತೆ, ಬೆಂಗಳೂರು-01.
ದಿನಾಂಕ: 26-07-2013.

## -:: ಸುತ್ತೋಲೆ ::-

**ವಿಷಯ:-** ರಾಜ್ಯಮಟ್ಟದ ಅಂತರ ಕಾಲೇಜು ಸಾಂಸ್ಕೃತಿಕ ಸ್ಪರ್ಧೆಗಳಿಗೆ ವಿದ್ಯಾರ್ಥಿಗಳನ್ನು ಕಳುಹಿಸುವ ಬಗ್ಗೆ.

**ಉಲ್ಲೇಖ:-** ಸಂಸ್ಥಾಪಕ ಅಧ್ಯಕ್ಷರು, ವಿಶ್ವಮಾನವ ವಿದ್ಯಾರ್ಥಿ ಯುವ ವೇದಿಕೆ ಇವರ ಪತ್ರ ದಿ:04-07-2013.

-0000000-

ವಿಶ್ವಮಾನವ ವಿದ್ಯಾರ್ಥಿ - ಯುವ ವೇದಿಕೆ(ರಿ), ಮೈಸೂರು, ಇವರು ಕಾಲೇಜು ವಿದ್ಯಾರ್ಥಿಗಳಿಗಾಗಿ ಆಗಸ್ಟ್ 30 ಮತ್ತು 31 ರಂದು ಮೈಸೂರಿನ ಕಲಾಮಂದಿರದಲ್ಲಿ **"ಸಾಂಸ್ಕೃತಿಕ ಹಬ್ಬ-2013"** ರಾಜ್ಯಮಟ್ಟದ ಅಂತರ ಕಾಲೇಜು ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಿರುತ್ತಾರೆ.

ಈ ಸ್ಪರ್ಧೆಯಲ್ಲಿ ಈ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಹಾಗೂ ಅನುದಾನಿತ ಇಂಜಿನಿಯರಿಂಗ್, ಪಾಲಿಟೆಕ್ನಿಕ್ ಹಾಗೂ ಕಲಾ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಲು ಸಂಸ್ಥಾಪಕ ಅಧ್ಯಕ್ಷರು, ವಿಶ್ವಮಾನವ ವಿದ್ಯಾರ್ಥಿ ಯುವ ವೇದಿಕೆ, ಮೈಸೂರು ಇವರು ಆಹ್ವಾನ ನೀಡಿರುತ್ತಾರೆ. ಪ್ರಯುಕ್ತ, ಸರ್ಕಾರಿ ಮತ್ತು ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು, ಪಾಲಿಟೆಕ್ನಿಕ್ ಹಾಗೂ ಕಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿಭಾವಂತ ವಿದ್ಯಾರ್ಥಿಗಳು ತಮ್ಮಲ್ಲಿರುವ ಪ್ರತಿಭೆಯನ್ನು ಪ್ರದರ್ಶಿಸುವ ನಿಟ್ಟಿನಲ್ಲಿ **ದಿನಾಂಕ:30-08-2013 ಮತ್ತು 31-08-2013ರಂದು** ನಡೆಯಲಿರುವ ಸಾಂಸ್ಕೃತಿಕ ಸ್ಪರ್ಧೆಗೆ ಭಾಗವಹಿಸಬಹುದಾಗಿದೆ.

**ಸ್ಪರ್ಧೆಯ ನಿಯಮಗಳು:**

- ಸ್ಪರ್ಧೆಯಲ್ಲಿ ಭಾಗವಹಿಸುವ ಹೊರ ಜಿಲ್ಲೆಯ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಆಗಸ್ಟ್ 29ನೇ ತಾರೀಖಿನ ಬೆಳಿಗ್ಗೆ 10 ರಿಂದ ಸೆಪ್ಟಂಬರ್ 01 ನೇ ತಾರೀಖಿನ ಬೆಳಗ್ಗೆ 10 ರ ವರೆಗೆ ಉಚಿತ ವಸತಿ ವ್ಯವಸ್ಥೆ ಇರುತ್ತದೆ.
- ರಿಯಾಯಿತಿ ದರದಲ್ಲಿ ವಿದ್ಯಾರ್ಥಿಗಳಿಗೆ ಕಾಫಿ-ಟೀ, ತಿಂಡಿ-ಊಟದ ವ್ಯವಸ್ಥೆ ಇರುತ್ತದೆ.
- ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಯಾವುದೇ ದಿನಭತ್ಯೆ ಹಾಗೂ ಪ್ರಯಾಣ ಭತ್ಯೆಯನ್ನು ನೀಡಲು ಅವಕಾಶವಿರುವುದಿಲ್ಲ.
- ವಿದ್ಯಾರ್ಥಿಗಳು ಕಾರ್ಯಕ್ರಮದ ಪಾಸ್‌ಗಳನ್ನು ಪಡೆಯಬಹುದು.
- ವಿದ್ಯಾರ್ಥಿಗಳು ತಪ್ಪದೆ ಕಾಲೇಜಿನ ಗುರುತಿನ ಚೀಟಿಯನ್ನು ತರುವುದು.

-ಮುತಿನೋ

**ಈ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕೆಳಕಂಡ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ.**

- ವಿವಿಧ ವೇಷ ಭೂಷಣ ಸ್ಪರ್ಧೆ (2 ನಿಮಿಷ), ಭಾವಗೀತೆ (3+1 ನಿಮಿಷ), ಜನಪದ ಗೀತೆ (3+1 ನಿಮಿಷ), ರಂಗೋಲಿ ಸ್ಪರ್ಧೆ (60. ನಿಮಿಷ), ಸ್ವರಚಿತ ಕವನ ವಾಚನ (4 ನಿಮಿಷ), ಹಾಸ್ಯ ಸಮಯ (3 ನಿಮಿಷ), ಮೂಕಾಭಿನಯ (2 ನಿಮಿಷ), ರಂಗಗೀತೆಗಳ ಗಾಯನ (3+1 ನಿಮಿಷ), ಏಕಪಾತ್ರಾಭಿನಯ (4 ನಿಮಿಷ), ಕನ್ನಡ ಚಲನಚಿತ್ರ ಗೀತೆಗಳ ಗಾಯನ (3+1 ನಿಮಿಷ), ಹಿಂದಿ ಚಲನಚಿತ್ರ ಗೀತೆಗಳ ಗಾಯನ (3+1 ನಿಮಿಷ), ಕನ್ನಡ ಅಂತ್ಯಾಕ್ಷರಿ, ಹಿಂದಿ ಅಂತ್ಯಾಕ್ಷರಿ ಹಾಗೂ ಮಿಸ್ ಕರ್ನಾಟಕ-2013 (3 ರೌಂಡ್ಸ್) ಹಾಗೂ ಮಿಸ್ಟರ್ ಕರ್ನಾಟಕ-2013 (3 ರೌಂಡ್ಸ್), ಆಶು ಭಾಷಣ ಸ್ಪರ್ಧೆ (3+1 ನಿಮಿಷ), ಯುವಜನರಲ್ಲಿ ನಾಯಕತ್ವ ಕುರಿತು ಉಪನ್ಯಾಸ ಮತ್ತು ಸಂವಾದ ಈ ಎಲ್ಲಾ ಪ್ರತಿಯೊಂದು ಸ್ಪರ್ಧೆಗೂ ಕಾಲೇಜಿನಿಂದ ಇಬ್ಬರು ವಿದ್ಯಾರ್ಥಿಗಳನ್ನು ಕಳುಹಿಸುವುದು.
- ಸಮೂಹ ಗಾಯನ (ಕುವೆಂಪು ಗೀತೆಗಳಿಗೆ), ಸಮೂಹ ಗಾಯನ(ನೆಲ-ಜಲ, ಭಾಷೆಗೆ ಸಂಬಂಧಿಸಿದ ಗೀತೆಗಳು), ಸಮೂಹ ನೃತ್ಯ (ಕುವೆಂಪು ಗೀತೆಗಳಿಗೆ), ಶಾಸ್ತ್ರೀಯ ನೃತ್ಯ (ಸಮೂಹ) (4 ನಿಮಿಷ), ಜನಪದ ಸಮೂಹ ನೃತ್ಯ (6 ನಿಮಿಷ), ಪಾಶ್ಚಾತ್ಯ ನೃತ್ಯ (ಸಮೂಹ) (4 ನಿಮಿಷ), ಯೋಗ ಪ್ರದರ್ಶನ (ಸಮೂಹ), ಕಿರುನಾಟಕಗಳ ಸ್ಪರ್ಧೆ (20 ನಿಮಿಷ), ಪಾರಂಪರಿಕ ಉಡುಗೆ-ತೊಡುಗೆ ಪ್ರದರ್ಶನ(ಸಮೂಹ) ಈ ಎಲ್ಲಾ ಪ್ರತಿಯೊಂದು ಸ್ಪರ್ಧೆಗೂ ಕಾಲೇಜಿನಿಂದ ಒಂದೊಂದು ತಂಡವನ್ನು ಕಳುಹಿಸುವುದು.
- ಶಾಸ್ತ್ರೀಯ ನೃತ್ಯ (Solo) (5+1 ನಿಮಿಷ). ಪಾಶ್ಚಾತ್ಯ ನೃತ್ಯ (Solo) (4+1 ನಿಮಿಷ) - ಈ ಸ್ಪರ್ಧೆಗಳಿಗೆ ಕಾಲೇಜಿನಿಂದ ತಲಾ ಇಬ್ಬರು ವಿದ್ಯಾರ್ಥಿಯನ್ನು ಕಳುಹಿಸುವುದು.
- ಆಫ್ ಮ್ಯಾರಾಥಾನ್ (ಹೆಣ್ಣು ಮಕ್ಕಳನ್ನು ರಕ್ಷಿಸಿ ಅತ್ಯಾಚಾರಿಗಳನ್ನು ಗಲ್ಲಿಗೇರಿಸಿ) ದಿನಾಂಕ:30-08-2013ರಂದು ಮೈಸೂರಿನ ಅರಮನೆಯಿಂದ (ಉತ್ತರ ದ್ವಾರ) ಕಲಾಮಂದಿರದವರೆಗೂ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಬಹುದು.

ಮೇಲ್ಕಂಡ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಸ್ವ-ಇಚ್ಛೆಯಿಂದ ಭಾಗವಹಿಸಲು ಇಚ್ಛೆಯುಳ್ಳ ಪ್ರತಿಭಾವಂತ ವಿದ್ಯಾರ್ಥಿಗಳನ್ನು ನಿಯಮಾನುಸಾರ ಕಳುಹಿಸುವಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಶ್ರೀ.ಎಂ.ಜೆ.ಸುರೇಶಗೌಡ, ಸಂಸ್ಥಾಪಕ ಅಧ್ಯಕ್ಷರು, ವಿಶ್ವಮಾನವ ವಿದ್ಯಾರ್ಥಿ ಯುವ ವೇದಿಕೆ, ನಂ.2618, ವಾಲ್ಮೀಕಿ ರಸ್ತೆ, ಒಂಟಿಕೊಪ್ಪಲ್, ಮೈಸೂರು, ದೂರವಾಣಿ ಸಂಖ್ಯೆ.9986345599 ಇವರನ್ನು ಸಂಪರ್ಕಿಸಬಹುದಾಗಿದೆ.

ಕರಡು ನಿರ್ದೇಶಕರಿಂದ
ಅನುಮೋದಿಸಿದೆ.

ನಿರ್ದೇಶಕರು

**ಅಡಕ:-** ಸ್ಪರ್ಧೆಗಳ ವಿವರ ಪಟ್ಟಿ.

**ಇವರಿಗೆ,**

ಎಲ್ಲಾ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳು, ಪಾಲಿಟೆಕ್ನಿಕ್‌ಗಳು ಹಾಗೂ ಕಲಾ ಕಾಲೇಜುಗಳ ಪ್ರಿನ್ಸಿಪಾಲರಿಗೆ ಸೂಕ್ತಮಾಹಿತಿಗಾಗಿ ಹಾಗೂ ಅನುಸರಣೆಗಾಗಿ.

**ಪ್ರತಿ:-**

1. ಎಂ.ಜೆ.ಸುರೇಶಗೌಡ , ಸಂಸ್ಥಾಪಕ ಅಧ್ಯಕ್ಷರು, ವಿಶ್ವಮಾನವ ವಿದ್ಯಾರ್ಥಿ ಯುವ ವೇದಿಕೆ, ನಂ.2618, ವಾಲ್ಮೀಕಿ ರಸ್ತೆ, ಒಂಟಿಕೊಪ್ಪಲ್, ಮೈಸೂರು.
2. ನಿರ್ದೇಶಕರ ಆಪ್ತಶಾಖೆಗೆ.
3. ಸಂಯೋಜನಾಧಿಕಾರಿಗಳು, ಇ-ಆಡಳಿತ, ತಾಂ.ಶಿ.ನಿ, ಬೆಂಗಳೂರು. - ಈ ಸುತ್ತೋಲೆಯನ್ನು ನಿರ್ದೇಶನಾಲಯದ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.
4. ಸಾರ್ವಜನಿಕ ಸಂಪರ್ಕಾಧಿಕಾರಿಗಳು, ತಾಂತ್ರಿಕ ಶಿಕ್ಷಣ ಇಲಾಖೆ. 5. ಹೆಚ್ಚಿನ ಪ್ರತಿ.